UASB Library
Newspaper Clippings
Tuesday 26-07-2022 Pg .1
Jai Kisan

ವಿ ರೈತ ಮಿತ್ರ



ಈರುಳ್ಳಿ ಬೆಳೆಯಲ್ಲಿ ಥ್ರಿಪ್ಸ ನುಶಿಯಿಂದ ಹಾನಿ ಹೆಚ್ಚಾಗುತ್ತಿದ್ದು, ಇದರ ನಿಯಂತ್ರಣ ಹೇಗೆ?

| ರಾಕೇಶ್ ಚಿಂತಾಮಣಿ ತಾಲೂಕು

ಥ್ರಿಪ್ಸ ನುಶಿಗಳು ಎಲೆಯ ಮೇಲೆ ಹೆಚ್ಚಾಗಿ ಕಂಡು ಬರುತ್ತದೆ. ಎಲೆಗಳ ಸುಳಿಯಲ್ಲಿ ಮತ್ತು ಎಲೆಗಳ ಕೆಳಗೆ ಕುಳಿತು ರಸಹೀರುತ್ತವೆ. ಎಲೆಗಳ ಮೇಲೆ ಬಿಳಿ ಬಿಳಿಯಾದ ಮಚ್ಚೆಗಳು ಕಾಣಿಸುತ್ತವೆ, ನಂತರ ತುದಿಯಿಂದ ಒಣಗುತ್ತವೆ.

ನಿರ್ವಹಣೆ: ಬಿತ್ತಿದ 3 ವಾರಗಳ ನಂತರ ಬೆಳೆಗೆ 0.25 ಮಿಲಿ ಇಮಿಡಾಕ್ಲೋಪ್ರಿಡ್ ಅಥವಾ 1.7 ಮಿ.ಲೀ. ಡೈಮಿಥೋಯೇಟ್ 30 ಇ.ಸಿ. ಅಥವಾ 0.5 ಮಿ. ಲೀ. ಫಾಸ್ಫಾಮಿಡಾನ್ 85 ಡಬ್ಲ್ಯು.ಎಸ್.ಸಿ. ಅಥವಾ 1.3 ಮಿ.ಲೀ. ಆಕ್ಸಿಡೆಮೆಟಾನ್ ಮಿಥೈಲ್ 1 ಲೀ. ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು. ಬಿತ್ತನೆಯಾದ 6, 9 ಮತ್ತು 11 ವಾರಗಳ ನಂತರ ಮೇಲೆ ಸೂಚಿಸಲಾದ ಸಿಂಪಡಣೆಯನ್ನು ಪುನರಾವರ್ತಿಸಬೇಕು.

| ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ಸಮಸ್ಯಾತ್ಮಕ ಮಣ್ಣುಗಳಲ್ಲಿ ಮೇವಿನ ಬೆಳೆಗಳನ್ನು ಬೆಳೆಯಬಹುದೇ?

| ಸಚಿನ್ ಹಿರಿಯೂರು ತಾಲೂಕು

ನಮ್ಮ ದೇಶದಲ್ಲಿ 437 ಮಿಲಿಯನ್ ಎಕರೆ ಪ್ರದೇಶವು ಶೀತಲೀಕರಣಗೊಂಡಿದ್ದು, ಇದರಲ್ಲಿ 37.5 ಮಿಲಿಯನ್ ಎಕರೆ ಆಮ್ಲೀಯತೆ, 17.5 ಮಿಲಿಯನ್ ಎಕರೆ ಲವಣ ಬಾಧಿತ ಹಾಗೂ 15 ಮಿಲಿಯನ್ ಎಕರೆ ಜೌಗು ಪ್ರದೇಶ ಕಂಡು ಬಂದಿದೆ. ಇಂತಹ ಸಮಸ್ಯಾತ್ಮಕ ಮಣ್ಣುಗಳಲ್ಲಿ ಭೂ ಸುಧಾರಣೆ ಕ್ರಮಗಳ ಭಾಗವಾಗಿ ಹಾಗೂ ಸ್ವಲ್ಪ ಮುಟ್ಟಿನ ಇಳುವರಿಯನ್ನಾದರೂ ಪಡೆಯಲು ಮೇವು ಬೆಳೆಯ ಉತ್ಪಾದನೆಯನ್ನು ಕಡಿಮೆ ಖರ್ಚಿನಲ್ಲಿ ವೃದ್ಧಿಸಬಹುದಾಗಿದೆ.



ಆಮ್ಲೀಯ ಮಣ್ಣಿನಲ್ಲಿ ಮೇವಿನ ಅಲಸಂದೆ, ತೋಕೆಗೋಧಿ, ಮುಸುಕಿನ ಜೋಳ, ನೆಟೇರಿಯಾ, ನೇಪಿಯರ್ ಹುಲ್ಲು, ಕ್ಷಾರ ಮಣ್ಣಿನಲ್ಲಿ ಜೋಳ, ಸಜ್ಜೆ, ರೋಡ್ಸ್ ಹುಲ್ಲು, ಪ್ಯಾರ ಹುಲ್ಲು ಮತ್ತು ಚೌಳು ಮಣ್ಣಿನಲ್ಲಿ ಜೋಳ, ಕುದುರೆ ಮಸಾಲೆ, ರೋಡ್ಸ್ ಹುಲ್ಲು ಮತ್ತು ಪ್ಯಾರ ಹುಲ್ಲನ್ನು ಬೆಳೆಯಬಹುದು.

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

25-07-2022
Vv Pg 11

ಆರಿಶಿಣ ಕೃಷಿ ಲಾಭದ ಮಿಷಿ



ಕೃಷಿಯಲ್ಲೂ ಮುಂದು

ಲಕ್ಷ್ಮೀಕಾಂತ ಕಳೆದ 10 ವರ್ಷದಿಂದ ಆರಣ್ಯ-ಕೃಷಿಯಲ್ಲಿ ತೊಡಗಿದ್ದಾರೆ. ಇವರ ಹೊಲದಲ್ಲಿ ಬೆಳೆದಿರುವ ಆರಣ್ಯ ಮತ್ತು ತೋಟಗಾರಿಕೆಯ ಬಗೆಬಗೆಯ 3,875 ಗಿಡಗಳಿಗೆ ಈಗ ನಾಲ್ಕು ವರ್ಷವಾಗಿದ್ದು, ಆರಣ್ಯ ಪ್ರದೇಶದ ಅನುಭವ ನೀಡುತ್ತಿವೆ. ಶ್ರೀಗಂಧ ಮತ್ತು ರಕ್ತಚಂದನದ ಸಾಲುಗಳ ಮಧ್ಯೆ ವಿವಿಧ ಮಿಶ್ರಬೆಳೆಗಳನ್ನೂ ಬೆಳೆದು ಲಾಭ ಗಳಿಸುತ್ತಿದ್ದಾರೆ. ಆರಣ್ಯ-ಕೃಷಿ ಸಾಧನೆಗಾಗಿ 2022ರ ಜ.26ರಂದು ಕೃಷಿ ಪಂಡಿತ ಪ್ರಶಸ್ತಿಯಲ್ಲದೆ, ಹಲವು ಸಂಘ-ಸಂಸ್ಥೆಗಳ ಪ್ರಶಸ್ತಿ-ಗೌರವಗಳಿಗೆ ಭಾಜನರಾಗಿದ್ದಾರೆ.

ಜಿ.ಚಂದ್ರಕಾಂತ ಕಲಬುರಗಿ

ಬಿಸಿಲನಾಡು ಕಲಬುರಗಿಯಲ್ಲಿ ಮಳೆ ಬಂತೆಂದರೆ ರೈತರಿಗೆ ಎಲ್ಲಿಲ್ಲದ ಸಂಭ್ರಮ. ತೊಗರಿ ಪ್ರಧಾನ ಬೆಳೆಯಾಗಿರುವ ಜಿಲ್ಲೆ 'ತೊಗರಿ ಕಣಜ' ಎಂದೇ ಪ್ರಸಿದ್ಧಿಯಾಗಿದೆ. ಇಂತಹ ಜಿಲ್ಲೆಯಲ್ಲಿ ರೈತರೊಬ್ಬರು ಆರಿಶಿಣ ಬೆಳೆದು, ಕೈತುಂಬಾ ಲಾಭ ಗಳಿಸಿ ಬದುಕು ಹಸನಾಗಿಸಿಕೊಂಡಿದ್ದಾರೆ.

ಕಲಬುರಗಿ ತಾಲೂಕು ಹಾಗರಗಾ ಗ್ರಾಮದ ನಲವತ್ತೆರಡು ವರ್ಷ ವಯೋಮಾನದ ರೈತ ಲಕ್ಷ್ಮೀಕಾಂತ ಹಿಬಾರೆ ಅವರೇ ಈ ಸಾಧಕ. ತನ್ನ ಮೂರೂವರೆ ಎಕರೆ ಬರಡು ಭೂಮಿಯಲ್ಲಿ ಈತ ಸಹಜ ಮತ್ತು ನೈಸರ್ಗಿಕ ಆರಣ್ಯ-ಕೃಷಿ ಕೈಗೊಂಡು ಪರಿಶುದ್ಧ ಔಷಧಯುಕ್ತ ಆರಿಶಿಣವನ್ನು ಮಿಶ್ರ ಬೆಳೆಯಾಗಿ ಬೆಳೆದು ಲಾಭ ಕಂಡುಕೊಂಡಿದ್ದಾರೆ.

ಕೃಷಿ ವಿಜ್ಞಾನ ಕೇಂದ್ರದ ತಂತ್ರಜ್ಞರ ಮಾರ್ಗದರ್ಶನದಂತೆ ಲಕ್ಷ್ಮೀಕಾಂತ, ಆರಿಶಿಣ ಬೇಸಾಯಕ್ಕಾಗಿ ಸೇಲಂ ತಳಿಯ ಆರಿಶಿಣ ಬೀಜದ ಗಡ್ಡೆಗಳನ್ನು ಪ್ರತಿ ಕೆ.ಜಿ.ಗೆ 40 ರೂ.ನಂತೆ 600 ಕೆ.ಜಿ. ತಂದು, ನೈಸರ್ಗಿಕ ಮತ್ತು ಜೈವಿಕ ಗೊಬ್ಬರಗಳಿಂದ ಹದಗೊಳಿಸಿದ ಭೂಮಿಯಲ್ಲಿ 3 ಅಡಿಯ ಏರು ಮಡಿಗಳನ್ನು ಮಾಡಿ, ಸಾಲಿನಿಂದ ಸಾಲಿಗೆ 8 ಅಡಿ ಹಾಗೂ ಬೀಜದಿಂದ ಬೀಜಕ್ಕೆ 1.5 ಅಡಿ ಅಂತರದಲ್ಲಿ 2021ರ ಮೇ ತಿಂಗಳಲ್ಲಿ ನಾಟಿ ಮಾಡಿದರು. ಇದಕ್ಕಾಗಿ ಇವರು ವೆಚ್ಚ ಮಾಡಿದ್ದು ಒಂದು ಲಕ್ಷ ರೂ.

ಹನಿ ನೀರಾವರಿಯಿಂದ ವಾರಕ್ಕೊಮ್ಮೆ ನೀರುಣಿಸುವ ಇವರು, ಆರಿಶಿಣ ಬೆಳೆಗೆ ತಗಲುವ ರೋಗಗಳ ತಡೆಗಾಗಿ ಬೇವಿನೆಣ್ಣೆ, ಟ್ರೈಕೋಡರ್ಮಾ ಮುಂತಾದವನ್ನು ಬಳಸುತ್ತಿದ್ದಾರೆ. ಲಘು ಪೋಷಕಾಂಶ(ಮೈಕ್ರೋ ನ್ಯೂಟ್ರಿಯೆಂಟ್)ಗಳಿಗೆ ಪ್ರಾಶಸ್ತ್ಯ ನೀಡಿದ್ದರಿಂದ ಒಂದೊಂದು ಗಿಡ 6 ಅಡಿಗಿಂತ



ಹೆಚ್ಚು ಎತ್ತರ ಸಮೃದ್ಧವಾಗಿ ಬೆಳೆದಿವೆ. ಮೊದಲ ಬೆಳೆಯನ್ನು 10 ತಿಂಗಳಿಗೆ ಕಟಾವು ಮಾಡಲಾಗಿದ್ದು, ಒಂದೂವರೆ ಟನ್ ಇಳುವರಿ ಬಂದಿದೆ.

ಲಕ್ಷ್ಮೀಕಾಂತ ಹಿಬಾರೆ ಬೆಳೆದ ಆರಿಶಿಣವನ್ನು ಭಾರತ ಸರ್ಕಾರದ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿದಾಗ ಅದರ ಪ್ರಮುಖ ಅಂಶವಾದ ಕರ್ಕ್ಯುಮಿನ್ ಶೇ.3.66 ಇರುವುದು ದೃಢಪಟ್ಟಿದೆ. ಇದಕ್ಕೆ ಶ್ರೀಗಂಧದ ಆಶ್ರಯದಲ್ಲಿ ಆರಿಶಿಣ ಬೆಳೆದಿರುವುದೇ ಪ್ರಮುಖ ಕಾರಣವಾಗಿದೆ. ಇದು ಕ್ಯಾನ್ಸರ್ ಮತ್ತಿತರ ರೋಗಗಳಿಗೆ ರಾಮಬಾಣವಾಗಿದೆ.

ಆರಿಶಿಣ ಪುಡಿ ತಯಾರಿ: ಪುಡಿ ತಯಾರಿಕೆಗಾಗಿ ಎಲ್ಲ ಆರಿಶಿಣ ಕೊಂಬುಗಳನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ಇತ್ತೀಚಿನ ತಂತ್ರಜ್ಞಾನದಂತೆ ಕುದಿಸಿ ಒಂದು ತಿಂಗಳ ಕಾಲ ಒಣಗಿಸುವರು. ನಂತರ ಪುಡಿ ತಯಾರಿಕಾ ಯಂತ್ರಗಳಲ್ಲಿ ಹಾಕಿ ಪುಡಿ ಮಾಡಿಸುವರು. ಬಳಿಕ 250 ಗ್ರಾಂ, 500 ಗ್ರಾಂ ಮತ್ತು ಒಂದು ಕೆ.ಜಿ. ಪ್ಯಾಕ್‌ಗಳಾಗಿ ಮಾಡಿ, ರಾಜ್ಯದ ಮತ್ತು ನೆರೆಯ ಮಹಾರಾಷ್ಟ್ರದ ಪ್ರಮುಖ ನಗರಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಈವರೆಗೆ 700ಕೆ.ಜಿ. ಆರಿಶಿಣ ಪುಡಿ ಮಾಡಿದ್ದು, 2 ಲಕ್ಷ ರೂ. ಆದಾಯ ನಿರೀಕ್ಷಿಸಿದ್ದಾರೆ.

ಪ್ರಾಚೀನ ಕಾಲದಿಂದಲೂ ಆರಿಶಿಣವನ್ನು ಸೌಂದರ್ಯವರ್ಧಕ, ಔಷಧ ಮತ್ತು ಎಲ್ಲ ಧಾರ್ಮಿಕ ಕಾರ್ಯಗಳಲ್ಲಿಯೂ ಬಳಸಲಾಗುತ್ತಿದೆ. ಆರಿಶಿಣ ಕೆಲವು ರೋಗಗಳು ಬಾರದಂತೆ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಈ ಬೇಸಾಯದ ಬಗ್ಗೆ ಜನಜಾಗೃತಿ ಮೂಡಿಸಬೇಕಾಗಿದೆ ಎನ್ನುತ್ತಾರೆ ಲಕ್ಷ್ಮೀಕಾಂತ ಹಿಬಾರೆ.

(ಲೇಖಕರು: ನಿವೃತ್ತ ಉಪನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ)

25-07-2022
Vv Pg 11

ಬಸವರಾಜ ಬೊಮ್ಮಾಯಿ ಸಾರಥ್ಯದಲ್ಲಿ ಪ್ರಗತಿಪಥದಲ್ಲಿ ರಾಜ್ಯ ಸರ್ಕಾರ | ಕೃಷಿ ಕ್ಷೇತ್ರದಲ್ಲಿ ಹಲವು ಯೋಜನೆ ಜಾರಿ

ಸಾರ್ಥಕ ಒಂದು ವರ್ಷ ಅನ್ನದಾತರ ಮೊಗದಲ್ಲಿ ಹರ್ಷ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು ಮೂರು ವರ್ಷಗಳಾಗಿದೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಒಂದು ವರ್ಷವಾಗಿದ್ದು, ವಿವಿಧ ಪ್ರಗತಿಪರ ಯೋಜನೆಗಳ ಮೂಲಕ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುತ್ತಿದ್ದಾರೆ.

ಕೃಷಿಯಲ್ಲಿ ಸಾಧನೆ: 2021-22ನೇ ಸಾಲಿನ ಕೃಷಿ ಬೆಳೆಗಳ ಪ್ರಸ್ತಾವಿತ ಬಿತ್ತನೆ ಗುರಿ 110.00 ಲಕ್ಷ ಹೆಕ್ಟೇರ್‌ಗೆ ಪ್ರತಿಯಾಗಿ 110,14 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿರುತ್ತದೆ (ಶೇ. 100). ಮೂರನೇ ಮುಂಗಡ ಅಂದಾಜಿನ ವರದಿಯಂತೆ ಒಟ್ಟು 139.83 ಲಕ್ಷ ಟನ್ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ. 2022-23ನೇ ಸಾಲಿನ ಮುಂಗಾರು ಹಂಗಾಮಿನ ಕೃಷಿ ಬೆಳೆಗಳ ಪ್ರಸ್ತಾವಿತ ಬಿತ್ತನೆ ಗುರಿ 82.67 ಲಕ್ಷ ಹೆಕ್ಟೇರ್ ಪ್ರತಿಯಾಗಿ ಈವರೆಗೆ, 19.89ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದೆ.

ಕಿಸಾನ್ ಸಮ್ಮಾನ್ ನಿಧಿ: ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (ರಾಜ್ಯ ಸರ್ಕಾರ) ಮೂಲಕ 2021-22ನೇ ಸಾಲಿನಲ್ಲಿ 5035000 ರೈತರಿಗೆ 1007.13 ಕೋಟಿ ರೂ. ಮತ್ತು 2022-23ನೇ ಸಾಲಿನಲ್ಲಿ 4783562 ರೈತರಿಗೆ 956,71 ಕೋಟಿ ರೂ. ಆರ್ಥಿಕ ನೆರವನ್ನು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲು ಮಂಜೂರಾತಿ ನೀಡಲಾಗಿದೆ.

ಫಸಲ್ ಬಿಮಾ ಯೋಜನೆ: 2020-21ಸಾಲಿನಲ್ಲಿ 4.99 ಲಕ್ಷ ರೈತರಿಗೆ 619.24 ಕೋಟಿ ರೂ.ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ. 2021-22 ಸಾಲಿನ ಮುಂಗಾರು ಹಂಗಾಮಿನಲ್ಲಿ 12.67 ಲಕ್ಷ ರೈತ ಪ್ರಸ್ತಾವನೆಗಳು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಾಯಿಸಿದ್ದು, ಇಲ್ಲಿಯವರೆಗೆ 5,39 ಲಕ್ಷ ರೈತರಿಗೆ 694.46 ಕೋಟಿ ರೂ. ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ. 2021-22 ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 3,09 ಲಕ್ಷ ರೈತ ಪ್ರಸ್ತಾವನೆಗಳು ಯೋಜನೆಯಡಿ ನೋಂದಾಯಿಸಿದ್ದು, ಅಕಾಲಿಕ ಮಳೆಯಿಂದ ಬೆಳೆ ನಷ್ಟ ಆದ ಬೆಳೆಗಳಿಗೆ ಬೆಳೆ ವಿಮೆ ಯೋಜನೆಯಡಿ ನೋಂದಾಯಿತ 3106 ರೈತರಿಗೆ ಇಲ್ಲಿಯವರೆಗೆ ರೂ.99.57 ಲಕ್ಷ ರೂ. ವಿಮಾ ಪರಿಹಾರ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದೆ.

ಕೃಷಿ ಯಾಂತ್ರೀಕರಣ- ಉತ್ಪನ್ನ ಸಂಸ್ಕರಣೆ: ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳಿಗೆ 4.54 ಲಕ್ಷ ರೈತರಿಗೆ 483.56 ಕೋಟಿ ರೂ.ಗಳ ಸಹಾಯಧನ ವಿತರಣೆ ಮಾಡಲಾಗಿದೆ.

ಸೂಕ್ಷ್ಮ ನೀರಾವರಿ ಯೋಜನೆ: 2021-22ನೇ ಸಾಲಿನಲ್ಲಿ, ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಲು 398,03 ಕೋಟಿ ರೂ. ಸಹಾಯಧನವನ್ನು 3.14 ಲಕ್ಷ ಫಲಾನುಭವಿಗಳಿಗೆ ಒದಗಿಸಿ, 3.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿ ವಿಸ್ತರಿಸಲಾಗಿದೆ.



ಮುಖ್ಯಮಂತ್ರಿ ರೈತ ವಿದ್ಯಾನಿಧಿ

ರಾಜ್ಯದ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮವನ್ನು ಘೋಷಿಸಲಾಗಿದೆ. ಕಾರ್ಯಕ್ರಮದಡಿ ಎಸ್ಸೆಸ್ಸೆಲ್ಸಿ ಅಥವಾ 10ನೇ ತರಗತಿ ನಂತರ, ರಾಜ್ಯದ ಯಾವುದೇ ಭಾಗದಲ್ಲಿನ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ ವಿವಿಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ಪ್ರವೇಶವನ್ನು ಪಡೆದಿರುವ ರೈತರ ಮಕ್ಕಳಿಗೆ ಹಾಗೂ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ಹೆಣ್ಣು ಮಕ್ಕಳಿಗೆ (ತರಗತಿ 8ರಿಂದ 10ನೇ ತರಗತಿವರೆಗೆ) ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

- ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆಯಡಿ ಇದುವರೆಗೂ 948292 ವಿದ್ಯಾರ್ಥಿಗಳಿಗೆ 397.213 ಕೋಟಿ ರೂ. ವಿದ್ಯಾರ್ಥಿ ವೇತನವನ್ನು ಡಿಬಿಟಿ ಮೂಲಕ ವರ್ಗಾವಣೆ ಮಾಡಲು ಮಂಜೂರಾತಿ ನೀಡಲಾಗಿದೆ.
- ರೈತರ ಮಕ್ಕಳು ಓದುತ್ತಿರುವ ಕೋರ್ಸ್‌ಗೆ ಅನುಗುಣವಾಗಿ 2,000 ರೂ.ಗಳಿಂದ 11,000 ರೂ. ವರೆಗೆ ವಿದ್ಯಾರ್ಥಿ ವೇತನ ಸೌಲಭ್ಯ
- ಆಜೀವ ಸದ್ಗತಿಯೇ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ಡಿಬಿಟಿ ಮೂಲಕ ಹಣ ವರ್ಗಾವಣೆ

ರೈತ ಶಕ್ತಿ ಯೋಜನೆ

2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 20ರಲ್ಲಿ ಕೃಷಿ ಉತ್ಪಾದಕತೆ ಹೆಚ್ಚಿಸುವಲ್ಲಿ ರೈತರಿಗೆ ಕೃಷಿಯಂತ್ರೋಪಕರಣಗಳನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ ಪ್ರತಿ ಎಕರೆಗೆ 250 ರೂ.ಗಳಂತೆ ಗರಿಷ್ಠ 5 ಎಕರೆಗೆ ಡಿ.ಬಿ.ಟಿ. ಮೂಲಕ ಡೀಸೆಲ್ ಗಾಗಿ ಸಹಾಯಧನ ನೀಡಲು ರೈತಶಕ್ತಿ ಎಂಬ ಹೊಸ ಯೋಜನೆ ಘೋಷಣೆ ಮಾಡಲಾಗಿದೆ. ರಾಜ್ಯದ ಎಲ್ಲ ರೈತರಿಗೆ ರೈತಶಕ್ತಿ ಯೋಜನೆಯಡಿ ಸಹಾಯ ಧನವನ್ನು ನೇರ ನಗದು ವರ್ಗಾವಣೆ ಮೂಲಕವೇ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ. ಈ ಬಗೆಗಿನ ಅಧಿಕೃತ ಆದೇಶ ಹೊರಡಿಸಲಾಗಿದ್ದು, ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ.

ನನ್ನ ಬೆಳೆ ನನ್ನ ಹಕ್ಕು- ಬೆಳೆ ಸಮೀಕ್ಷೆ

2021-22ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 208,41 ಲಕ್ಷ ತಾಕುಗಳ ಗುರಿಗೆ ಅನುಗುಣವಾಗಿ ರೈತರ ಮೊಬೈಲ್ ಆ್ಯಪ್ ಮುಖೇನ 14.62 ಲಕ್ಷ ತಾಕುಗಳು ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮುಖೇನ 242.34 ಲಕ್ಷ ತಾಕುಗಳಂತೆ ಒಟ್ಟು 256,96 ಲಕ್ಷ ತಾಕುಗಳ (ಪೂರ್ವ ಮುಂಗಾರು ಒಳಗೊಂಡಂತೆ) ಬೆಳೆ ಸಮೀಕ್ಷೆ ಕೈಗೊಳ್ಳಲಾಗಿದೆ. ಹಿಂಗಾರು ಹಂಗಾಮಿನಲ್ಲಿ ಒಟ್ಟು 105,07 ಲಕ್ಷ ತಾಕುಗಳ, ಗುರಿಗೆ ಅನುಗುಣವಾಗಿ ರೈತರ ಆ್ಯಪ್ ಮೂಲಕ 2,49 ಲಕ್ಷ ತಾಕು ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 100.13 ಲಕ್ಷ ತಾಕುಗಳಂತೆ ಒಟ್ಟು 102.62 ಲಕ್ಷ ತಾಕುಗಳ ಬೆಳೆ ಸಮೀಕ್ಷೆ ಕೈಗೊಳ್ಳಲಾಗಿದೆ. ಬೇಸಿಗೆ ಹಂಗಾಮಿನಲ್ಲಿ ಒಟ್ಟು 68.72 ಲಕ್ಷ ತಾಕುಗಳ, ಗುರಿಗೆ ಅನುಗುಣವಾಗಿ ರೈತರ ಆ್ಯಪ್ ಮೂಲಕ 0.39 ಲಕ್ಷ ತಾಕು ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 16.18 ಲಕ್ಷ ತಾಕುಗಳಂತೆ ಒಟ್ಟು 66,58 ಲಕ್ಷ ತಾಕುಗಳ ಬೆಳೆಸಮೀಕ್ಷೆ ಕೈಗೊಳ್ಳಲಾಗಿದೆ. ಪ್ರಸ್ತ 2022-23ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲು ಪೂರ್ವಸಿದ್ಧತೆ ಪ್ರಗತಿಯಲ್ಲಿದ್ದು, ರೈತರ ಮೊಬೈಲ್ ಆ್ಯಪ್ ಬಿಡುಗಡೆಗೆ ಸಿದ್ಧವಾಗಿರುತ್ತದೆ.



ಕೃಷಿ ಇಲಾಖೆಯ ಯೋಜನಾವಾರು ಪ್ರಗತಿ

2021-22ನೇ ಸಾಲಿನಲ್ಲಿ ಕೃಷಿ ಇಲಾಖೆಯ ವಿವಿಧ ಯೋಜನೆ/ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 562913.48ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, 561676.26 ಲಕ್ಷ ರೂ. ವೆಚ್ಚ ಭರಿಸಿ ಕೇ. 99.78 ಪ್ರಗತಿ ಸಾಧಿಸಲಾಗಿದೆ. ಈಗ ಕೃಷಿ, ತೋಟಗಾರಿಕೆ, ಜಲಾನಯನ, ರೇಷ್ಮೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಪಶುಪಾಲನಾ ಮತ್ತು ವೈದ್ಯ ಸೇವಾ ಇಲಾಖೆ, ಮೀನುಗಾರಿಕೆ, ಸಹಕಾರ ಸೇವೆ, ಅರಣ್ಯ ಇಲಾಖೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ, ಸಾರಿಗೆ, ವಸತಿ, ಕಾರ್ಮಿಕರ ಇಲಾಖೆ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಆಹಾರ ನಾಗರಿಕ ಸರಬರಾಜು ಮತ್ತು ವ್ಯವಹಾರಗಳ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕೈಮಗ್ಗ ಮತ್ತು ಜವಳಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನಗರಾಭಿವೃದ್ಧಿ, ಕಂದಾಯ, ಹಿಂದುಳಿದ ವರ್ಗಗಳ ಕಲ್ಯಾಣ, ಪ್ರವಾಸೋದ್ಯಮ, ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಸೇರಿ ಎಲ್ಲ ಇಲಾಖೆಗಳ ಮೂಲಕ ಸಾವಿರಾರು ಯೋಜನೆಗಳ ಮೂಲಕ ರಾಜ್ಯದ ಸಮಗ್ರ ಅಭಿವೃದ್ಧಿ ಮಾಡುವಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಸಫಲವಾಗಿದೆ.



ಬೊಮ್ಮಾಯಿ ನಿರಾಡಂಬರವೇ ರಾಜ್ಯಕ್ಕೆ ಆಭರಣ

ಕೃಷಿ ತೋ ನಾಸ್ತಿ ದುರ್ಭಿಕ್ಷಂ.

ಹೌದು. ಸ್ವಯಂ ಕೃಷಿಯಿಂದ ಮನುಷ್ಯ ಮಹರ್ಷಿಯೂ ಆಗಬಹುದು. ಸಾಧಕನಿಗೆ ಲೋಕವೇ ಯಾಗಶಾಲೆ. ಅದು ಪ್ರಯೋಗಶಾಲೆ, ಪಾಠಶಾಲೆ ಹಾಗೂ ಪಾಕಶಾಲೆ ಕೂಡಾ. ಪ್ರಾಮಾಣಿಕ ಮನಸು ಮತ್ತು ಸಂಕಲ್ಪದಿಂದ ಮನುಷ್ಯ ತನ್ನ ಬದುಕಲ್ಲಿ ತನಗೇ ಗೊತ್ತಿಲ್ಲದಂತೆ ಪರಿಪೂರ್ಣ ದಾರಿಯತ್ತ ಸಾಗುತ್ತಾನೆ.

ರಾಜಕಾರಣದಲ್ಲಿ ಎಲ್ಲರೂ ತಾವು ಅಂದುಕೊಂಡಿದ್ದೆಲ್ಲವನ್ನೂ ಸಾಧಿಸಲಾಗುವುದಿಲ್ಲ. ಈ ವಿಷಯದಲ್ಲಿ ಹೋಲಿಕೆ ಅಪ್ರಸ್ತುತ. ಓರ್ವ ಮೆಕಾನಿಕಲ್ ಇಂಜಿನಿಯರ್ ತನ್ನ ಗುರಿ ಸಾಧಿಸಲು ನಿಗದಿತ ಕ್ಷೇತ್ರವಾದರೂ ಯಾವುದು? ಕೈಗಾರಿಕೆ, ಯಂತ್ರ, ಲೋಹಗಳ ಪ್ರಪಂಚ. ಏಕೆಂದರೆ ಯಾಂತ್ರಿಕ ಶಿಕ್ಷಣದ ಕಲಿಕೆಯ ಮೂಲ ಉದ್ದೇಶವೇ ಇದು. ಭವಿಷ್ಯದಲ್ಲಿ ಇದೇ ಕಲಿಕೆ ವೃತ್ತಿಗೆ ಹತ್ತಿರವಾಗುವಂತಹದ್ದು. ಆದರೆ, ಒಮ್ಮೆಮ್ಮೆ ಕೆಲ ವ್ಯಕ್ತಿಗಳಿಗೆ ಪ್ರವೃತ್ತಿಗಳೂ ವೃತ್ತಿಗಳಾಗುತ್ತವೆ. ಓರ್ವ ವ್ಯಕ್ತಿಯ ಬದುಕಿನ ಪಯಣವನ್ನೇ ಬದಲಿಸುತ್ತೆ.

ರಾಜ್ಯದ ಸಿಎಂ ಬಸವರಾಜ ಬೊಮ್ಮಾಯಿ ಓರ್ವ ಮೆಕಾನಿಕಲ್ ಇಂಜಿನಿಯರ್. ಮೇಲೆ ಹೇಳಿದಂತೆ ಇವರ ವೃತ್ತಿ ಬದುಕಿನಲ್ಲಿ ಇಂಜಿನಿಯರಿಂಗ್ ಕ್ಷೇತ್ರದ ಯಾಂತ್ರಿಕ ವಿನ್ಯಾಸ ಉಪಕರಣಗಳ ಉತ್ಪಾದನೆಗಳಾವುದೂ ಕೈ ಹಿಡಿಯಲಿಲ್ಲ. ಬದಲಿಗೆ ನಾಡನ್ನೇ ವಿವಿಧ ಕೋನಗಳಲ್ಲಿ ಅಳತೆ ಮಾಡಿ ರಾಜ್ಯವನ್ನು ಕಟ್ಟುವ ಕೆಲಸದಲ್ಲಿ ಇವರು ತಮ್ಮನ್ನು ತೊಡಗಿಸಿಕೊಳ್ಳುವಂತಾಗಿದ್ದು ಅತಿಮುಖ್ಯ.

ರಾಜಕಾರಣದಲ್ಲಿ ಸರಳತೆ ಎಂಬುದು ಇತ್ತೀಚಿನ ದಿನಗಳಲ್ಲಿ ಅತಿ ವಿರಳವಾಗಿದೆ. ಅಧಿಕಾರ ಎಂದರೆ ಆಡಂಬರ, ವೈಭವ ಹಾಗೂ ಅದ್ದೂರಿಗಳ ಆಗಮನ ಪ್ರದರ್ಶನವಲ್ಲ ಅಥವಾ ಅಧಿಕಾರವೆಂಬ ದಂತಗೋಪುರದಲ್ಲಿ ಕುಳಿತು ಕನಸು ಕಾಣುವುದೂ ಅಲ್ಲ. ಫರ್ಮಾನುಗಳ ಮೂಲಕವೇ ಪ್ರಜಾತಂತ್ರದಲ್ಲಿ ದರ್ಬಾರು ಚಲಾಯಿಸುವುದೂ ಅಲ್ಲ. ರಾಜಕೀಯದಲ್ಲಿ ತಾನಿಂದು ಹೊಂದಿರುವ ಪದವಿ ಮತ್ತು ಹುದ್ದೆ ನಾಳೆ ಕಳೆದು ಹೋಗಲೂಬಹುದು! ಈ ರಾಜಕೀಯ ಕಟುಸತ್ಯವನ್ನು ಮುಖ್ಯಮಂತ್ರಿ ಚೆನ್ನಾಗಿಯೇ ಅರಿತವರು. ಆದ್ದರಿಂದಲೇ ಅವರು ಅನಗತ್ಯ ರಾಜಕೀಯ ಒತ್ತಡಗಳಿಂದ ದೂರವಿದ್ದಾರೆ. ಮಾನಸಿಕ ನೆಮ್ಮದಿಯನ್ನೂ ಕಾಪಾಡಿಕೊಂಡಿದ್ದಾರೆ.



ಬೊಮ್ಮಾಯಿ 28 ವರ್ಷಗಳ ಹಿಂದೆ ರಾಜಕಾರಣಕ್ಕೆ ಕಾಲಿಟ್ಟಾಗ ಹೇಗಿದ್ದರೋ, ಈಗಲೂ ಅವರ ವ್ಯಕ್ತಿತ್ವದಲ್ಲಿ ಬದಲಾವಣೆ ಇಲ್ಲ. ಅಧಿಕಾರದ ಮಜಲುಗಳು ಬದಲಾದಂತೆ ಕೆಲವರ ಮಾತು ಮತ್ತು ಕೃತಿಯಲ್ಲಿ ಬಹಳಷ್ಟು ಬದಲಾವಣೆ ಕಾಣುತ್ತದೆ. ಆದರೆ ಬೊಮ್ಮಾಯಿ ಇದಕ್ಕೆ ಹೊರತಾಗಿದ್ದಾರೆ.

ಓರ್ವ ಪ್ರಜಾಪ್ರತಿನಿಧಿಯಾಗಿ ಸದನದ ಒಳಗೆ ಮತ್ತು ಹೊರಗೆ ನಿಭಾಯಿಸಬೇಕಾದ ಕರ್ತವ್ಯಗಳ ಬಗ್ಗೆ ಸಾರದರ್ಶಕ ತಿಳುವಳಿಕೆ ಮತ್ತು ದೂರದೃಷ್ಟಿ ಅಗತ್ಯ. ಜನತೆಯ ಕುಂದುಕೊರತೆಗಳ ಬಗ್ಗೆ ಸಂಪೂರ್ಣ ಅರಿವು ಮತ್ತು ಅವುಗಳ ಪರಿಹಾರದ ದೃಷ್ಟಿಯಲ್ಲಿ ಯಂತ್ರಾಂಗಕ್ಕೆ ನೀಡಬೇಕಿರುವ ಸೂಚನೆ ಮತ್ತದರ ಕಾರ್ಯಾನುಷ್ಠಾನದ ವಿಚಾರದಲ್ಲಿ ಮುಖ್ಯಮಂತ್ರಿ ಮೊದಲಿಂದಲೂ ತಿಸ್ತು ಕಾಪಾಡಿಕೊಂಡು ಬಂದಿದ್ದಾರೆ.

ರಾಜ್ಯವೊಂದರ ಮುಖ್ಯಮಂತ್ರಿ ಎಂದರೆ ಹಾಲಿವುಡ್ ಸಿನಿಮಾದ ಜೇಮ್ಸ್ ಬಾಂಡ್ ಅಲ್ಲ ಅಥವಾ ಬಾಹುಬಲಿಯೂ ಅಲ್ಲ. ಗುರುತರವಾದ ಹೊಣೆಗಾರಿಕೆಗಳನ್ನು ತಲೆಮೇಲೆ ಹೊತ್ತರೂ, ತೀವ್ರ ಒತ್ತಡ ಮತ್ತು ಭಾರವನ್ನು ಆನಾಯಾಸವಾಗಿ ನಿಭಾಯಿಸಿ ಎಲ್ಲರ ಮನಗೆದ್ದು ಸಣ್ಣ ನಗೆ ಬೀರುವ ವ್ಯಕ್ತಿಯೇ ಜನನಾಯಕ. ಈ ಲಕ್ಷಣಗಳೆಲ್ಲವೂ ಬಸವರಾಜ ಬೊಮ್ಮಾಯಿ ಅವರಲ್ಲಿದೆ.

ಸಮಗ್ರ ಕೃಷಿ ವಿಸ್ತರಣೆ

ರೈತರ ಆದಾಯ ದ್ವಿಗುಣಗೊಳಿಸಲು ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯತೆ ಕಾರ್ಯಕ್ರಮದಡಿ 2 ವರ್ಷಗಳ ಅವಧಿಯಲ್ಲಿ ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಸಮಗ್ರ ಕೃಷಿ ಪದ್ಧತಿಯ ಮಾದರಿ ಸ್ಥಾಪಿಸಿ, ಕಲಿಕಾ ಕೇಂದ್ರವಾಗಿ ರೂಪಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 72.34 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. 2021-22 ನೇ ಸಾಲಿನಲ್ಲಿ 1703 ಫಲಾನುಭವಿಗಳು ಸಮಗ್ರ ಕೃಷಿ ಪದ್ಧತಿಯ ಮಾದರಿಯನ್ನು ಸ್ಥಾಪಿಸಿದ್ದು 514 ಫಲಾನುಭವಿಗಳಿಗೆ 2,65 ಕೋಟಿ ರೂ. ಸಹಾಯಧನವನ್ನು ನೇರ ನಗದು ವರ್ಗಾವಣೆ ಮಾಡಲಾಗಿರುತ್ತದೆ. 2022-23 ನೇಸಾಲಿಗೆ 3810 ಮಾದರಿಗಳ ಅನುಷ್ಠಾನ ಕಾರ್ಯಕ್ರಮ ಪ್ರಗತಿಯಲ್ಲಿದೆ.

ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ

ಕೇ೦ದ್ರದ ರೈತರ ಆದಾಯ ದ್ವಿಗುಣಗೊಳಿಸುವ ಸಮಿತಿ ಮುಖ್ಯಸ್ಥರೊಂದಿಗೆ ಸಿಎಂ ಚರ್ಚೆ, ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ ಸ್ಥಾಪಿಸಲು ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಮೂಲಕ ರೈತರಿಗೆ ಆದಾಯ ತರಲು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಪೂರಕವಾದ ಪ್ರತ್ಯೇಕ ಸೆಕೆಂಡರಿ ನಿರ್ದೇಶನಾಲಯದ ಸ್ಥಾಪನೆ ಮಾಡಲಾಗಿದೆ.

ತಾಂತ್ರಿಕತೆ ಅಭಿವೃದ್ಧಿಗೆ ಸಮಿತಿ ರಚನೆ

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಮೂಲಕ ರೈತರಿಗೆ ಅನುಕೂಲವಾಗುವಂಥ ತಾಂತ್ರಿಕತೆಗಳನ್ನು ಅಭಿವೃದ್ಧಿ ಪಡಿಸುವ ಕುರಿತು ಪರಿಶೀಲಿಸಲು ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲಾಗಿದೆ. ರೈತರ ಅವಶ್ಯಕತೆ ಮತ್ತು ಬೇಡಿಕೆ ಆಧಾರದ ಮೇಲೆ ಸಂಶೋಧನೆ ಕೈಗೊಳ್ಳಬೇಕಾದ ವಿಷಯಗಳ ಬಗ್ಗೆ, ಹೊಸ ಆವಿಷ್ಕಾರಗಳ ಬಗ್ಗೆ, ಗ್ರಾಹಕರಿಗೆ ಪೌಷ್ಟಿಕತೆ ನಿಡುವ ತಾಂತ್ರಿಕತೆಗಳು ಹಾಗೂ ಪರಿಸರದಲ್ಲಿ ಸುಸ್ಥಿರತೆಯನ್ನು ಕಾಪಾಡುವಂಥ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ಸದರಿ ತಾಂತ್ರಿಕತೆಗಳನ್ನು ರೈತರಿಗೆ ತಲುಪಿಸಲು ಸೂಕ್ತ ನಿರ್ದೇಶನ ನೀಡುವುದು, ಉನ್ನತ ಮಟ್ಟದ ಸಮಿತಿಯು ಕೃಷಿ ಉಪ ಉತ್ಪನ್ನಗಳನ್ನು ಉತ್ತೇಜಿಸುವಂತಹ ಕಾರ್ಯಕ್ರಮ ರೂಪಿಸಿ ಸೆಕೆಂಡರಿ ಕೃಷಿ ನಿರ್ದೇಶನಾಲಯದ ಮೂಲಕ ಅನುಷ್ಠಾನ ಮಾಡಲು ಸಮಿತಿಯು ಸಹಕಾರಿಯಾಗುತ್ತದೆ.



ಬಿತ್ತನೆ ಬೀಜ ವಿತರಣೆ

ಭತ್ತ, ರಾಗಿ, ಜೋಳ, ಮೆಕ್ಕೆಜೋಳ, ಉದ್ದು, ಹೆಸರು, ಕಡಲೆ, ಅಲಸಂದೆ, ನೆಲಗಡಲೆ, ಸೋಯಾಅವರೆ, ಸೂರ್ಯಕಾಂತಿ, ಗೋಧಿ, ಕುಸುಬೆ ಮತ್ತು ನವಣೆ ಬಿತ್ತನೆ ಬೀಜಗಳ ಪ್ರಮಾಣಿತ ಹಾಗೂ ನಿಜ ಚೀಟಿ ಬಿತ್ತನೆ ಬೀಜಗಳನ್ನು ರಾಜ್ಯದ ಎಲ್ಲ ವರ್ಗದ ರೈತರಿಗ

ಬಿತ್ತನೆ ಚುರುಕು, ಹೆಚ್ಚಿದ ಬೇಡಿಕೆ: ಸಕಾಲಕ್ಕೆ ದೊರೆಯದೆ ಕೃಷಿಕರ ಆಳಲು

ರಸಗೊಬ್ಬರಕ್ಕೆ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಮುಂಗಾರಿನಲ್ಲಿ ರಾಜ್ಯದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿ ಕೃಷಿ ಚಟುವಟಿಕೆ ಚುರುಕು ಪಡೆದುಕೊಂಡಿದೆ. ಆದರೆ, ಬೇಡಿಕೆಗೆ ತಕ್ಕಷ್ಟು ಯೂರಿಯಾ ಮತ್ತು ಡಿಎಪಿ ರಸಗೊಬ್ಬರ ಸಕಾಲಕ್ಕೆ ದೊರೆಯದೆ ಅನ್ನದಾತರು ಪರದಾಡುತ್ತಿದ್ದಾರೆ.

ಬಿತ್ತನೆ ಸಮಯವಾದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸಹಜವಾಗಿಯೇ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚು. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಪ್ರಸಕ್ತ ಮುಂಗಾರು ಹಂಗಾಮಿಗೆ ರಾಜ್ಯದಲ್ಲಿ 26.76 ಲಕ್ಷ ಟನ್‌ಗಳಷ್ಟು ಬೇಡಿಕೆ ಸೃಷ್ಟಿಯಾಗಬಹುದು ಎಂದು ಕೃಷಿ ಇಲಾಖೆ ಅಂದಾಜಿಸಿತ್ತು.

ಭತ್ತ, ರಾಗಿ, ಜೋಳ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ನಡೆಯುತ್ತಿದೆ. ಈ ಸಮಯದಲ್ಲೇ ದಿನೇ ದಿನೇ ರಸಗೊಬ್ಬರ ಸಮಸ್ಯೆ ಹೆಚ್ಚುತ್ತಿದ್ದು, ರೈತರು ಅಂಗಡಿಗಳ ಎದುರು ಕಾದು ನಿಲ್ಲಬೇಕಾದ ಸ್ಥಿತಿ ಸೃಷ್ಟಿಯಾಗುತ್ತಿದೆ. ಹಲವೆಡೆ ಪೂರೈಕೆಯಾದ ತಕ್ಷಣವೇ ಖಾಲಿಯಾಗುತ್ತಿದೆ. ಕೆಲವೆಡೆ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆ. ನಿಗದಿತ ಬೆಲೆಗಿಂತ ಹೆಚ್ಚು ಹಣ ಪಡೆದು ಮಾರಾಟ ಮಾಡುತ್ತಿದ್ದಾರೆ. ಅನಿವಾರ್ಯ ಪರಿಸ್ಥಿತಿ ಇರುವುದರಿಂದ ಹೆಚ್ಚು ಹಣ ನೀಡುವುದು ಅನಿವಾರ್ಯ. ಕೆಲವು ಜಿಲ್ಲೆಗಳಲ್ಲಿ ರಸಗೊಬ್ಬರಕ್ಕೆ ನೂಕುನುಗ್ಗಲು ಉಂಟಾಗುತ್ತಿದೆ ಎಂದು ರೈತ ಸಂಘದ ಮುಖಂಡರು ದೂರಿದ್ದಾರೆ.

'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರಸಗೊಬ್ಬರ ಕೊರತೆಯಾಗಿದೆ. ಭತ್ತ ಮತ್ತು ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಯೂರಿಯಾಗೆ ಹಾಗೂ ರಾಗಿ, ಹತ್ತಿ, ಜೋಳ, ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ಡಿಎಪಿಗೆ ಬೇಡಿಕೆ ಹೆಚ್ಚಾಗಿದೆ. ಸರ್ಕಾರ ರಸಗೊಬ್ಬರ ಪೂರೈಕೆಗೆ ಸರಿಯಾದ ಕ್ರಮಗಳನ್ನು ಕೈಗೊಂಡಿದ್ದರೆ ಈ ಪರಿಸ್ಥಿತಿ ಸೃಷ್ಟಿಯಾಗುತ್ತಿರಲಿಲ್ಲ' ಎಂದು ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅಸಮಾಧಾನ ವ್ಯಕ್ತಪಡಿಸಿದರು.

'ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆಯಾಗುತ್ತಿಲ್ಲ. 200 ಚೀಲ ರಸಗೊಬ್ಬರಕ್ಕೆ 300ಕ್ಕೂ ಹೆಚ್ಚು ರೈತರು ಕಾಯುತ್ತಿರುತ್ತಾರೆ. ಕೆಲವರಿಗೆ ಮಾತ್ರ ದೊರೆಯುತ್ತಿದೆ. ಉಳಿದವರು ಬರಿಗೈಯಲ್ಲಿ ಹೋಗಬೇಕಾಗುತ್ತದೆ. ಪ್ರತಿ ವರ್ಷವೂ ಇದೇ ಸಮಸ್ಯೆಯಾಗುತ್ತಿದೆ' ಎಂದು ರೈತ ಸಂಘದ ದೊಡ್ಡಬಳ್ಳಾಪುರ ತಾಲ್ಲೂಕು ಘಟಕದ ಅಧ್ಯಕ್ಷ ಹನುಮೇಗೌಡ ದೂರಿದರು.

'ಸಂಗ್ರಹ ಇದೆ, ರೈತರು ಆತಂಕಗೊಳ್ಳುವ ಅಗತ್ಯವಿಲ್ಲ'

'ಎಲ್ಲೆಡೆ ಮಳೆಯಾಗಿರುವುದರಿಂದ ಸಹಜವಾಗಿಯೇ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚಾಗಿದೆ. ಆದರೆ, ರೈತರು ಆತಂಕಪಡುವ ಅಗತ್ಯವಿಲ್ಲ. ಸಾಕಷ್ಟು ಸಂಗ್ರಹ ಲಭ್ಯವಿದೆ. ರಾಜ್ಯಕ್ಕೆ ರಸಗೊಬ್ಬರ ನಿಯಮಿತವಾಗಿ ಪೂರೈಕೆಯಾಗುತ್ತಿದೆ' ಎಂದು ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ ಅವರು ತಿಳಿಸಿದರು.

'ರಾಜ್ಯದಲ್ಲಿನ ಒಟ್ಟು 83 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇದುವರೆಗೆ ಶೇ 68ರಷ್ಟು ಬಿತ್ತನೆಯಾಗಿದೆ. ಇನ್ನೂ ಆಗಸ್ಟ್ 15ರವರೆಗೆ ಕಾಲಾವಕಾಶ ಇದೆ. ರಸಗೊಬ್ಬರವನ್ನು ಸಕಾಲಕ್ಕೆ ರೈತರಿಗೆ ತಲುಪಿಸಲು ಯಾವುದೇ ರೀತಿಯ ತೊಡಕುಗಳಾಗದಂತೆ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ, ಕೊರತೆಯಾಗುವ ಆತಂಕದಿಂದ ರಸಗೊಬ್ಬರ ಸಂಗ್ರಹಿಸಿಟ್ಟು ಕೊಳ್ಳುವ ಅಗತ್ಯವೇ ಇಲ್ಲ. ಜತೆಗೆ, ನ್ಯಾನೊ ಯೂರಿಯಾ ಬಳಸುವಂತೆ ರೈತರಿಗೆ ಸಲಹೆ ನೀಡಲಾಗಿದೆ' ಎಂದು ವಿವರಿಸಿದರು.

15 ಲಕ್ಷ ಬಾಟಲ್ ನ್ಯಾನೊ ಯೂರಿಯಾ ಮಾರಾಟ

ರಾಜ್ಯದಲ್ಲಿ ಏಪ್ರಿಲ್‌ನಿಂದ ಇಲ್ಲಿಯವರೆಗೆ 15 ಲಕ್ಷ ಬಾಟಲ್ ನ್ಯಾನೊ ಯೂರಿಯಾ ಮಾರಾಟ ಮಾಡಲಾಗಿದೆ. 'ನ್ಯಾನೊ ಯೂರಿಯಾಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. 500 ಮಿಲಿ ಲೀಟರ್ ಬಾಟಲ್ ನ್ಯಾನೊ ಯೂರಿಯಾ 45 ಕೆ.ಜಿ. ತೂಕದ ಒಂದು ಚೀಲ ಯೂರಿಯಾಗೆ ಸಮನಾಗಿದೆ' ಎಂದು ಇಫ್ಕೊ ಮಾರುಕಟ್ಟೆ ವ್ಯವಸ್ಥಾಪಕ ಡಾ.ಸಿ. ನಾರಾಯಣಸ್ವಾಮಿ ತಿಳಿಸಿದ್ದಾರೆ.

26-07-2022 Pv Pg 06